ಶ್ರೀ ಶಿವಾನಂದ ಹೆಚ್. ಕೌಜಲಗಿ : ಅಧ್ಯಾಪಕರು ಇಲ್ಲ, ಬಿಲ್ಡಿಂಗ್ ಇಲ್ಲ ಅದು ನಮ್ಮ ತಪ್ಪು ಅಲ್ಲ, ಹೌಸ್‌ನಲ್ಲಿ ಟೆಕ್ನಿಕಲ್ ಎಜುಕೇಷನ್ ಯುನಿವರ್ಸಿಟಿ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟನಂತರ ಆಶ್ವಾಸನೆ ಈಡೇರಿಸುವುದು ಸರ್ಕಾರದ ಕರ್ತವ್ಯ ಅಂತ ನಾನು ಹೇಳುತ್ತೇನೆ. ಈಗ ಪ್ರೈಮರಿ ಸ್ಕೂಲ್ ಟೀಚರ್ಸ್ ಇಲ್ಲ ಅದು ಇಲ್ಲ ಇದು ಇಲ್ಲ, ಎಂದು ನಮ್ಮನ್ನು ಕೇಳುತ್ತೀರಿ.

ಶ್ರೀ ಕೆ.ಹೆಚ್. ರಂಗನಾಥ್ : ಕೌಜಲಗಿ ಅವರನ್ನು, ದೇಶಪಾಂಡೆಯವರನ್ನು ಏಕೆ ಕೇಳುತ್ತಿದ್ದೇವೆ ಎಂದರೆ ಅವರೂ ಒಂದು 7 ವರ್ಷ ಈ ರಾಜ್ಯದ ಹೋಣೆ ಹೊತ್ತಿದ್ದರೂ ಅದಕ್ಕೋಸ್ಕರ ಕೇಳಿದೆ ಅಷ್ಟೆ.

ಶ್ರೀ ಎಸ್.ಎಚ್. ಕೌಜಲಗಿ : ಎರಡು ವರ್ಷಗಳ ಸಾಧನೆ ಸಮಾರಂಭ ಮಾಡುವುದಕ್ಕೆ ರೋಕ್ಕ ಬರುತ್ತದೆ ಇಂತಹ ಒಳ್ಳೆಯ ಕೆಲಸಕ್ಕೆ ರೊಕ್ಕ ಬರುವುದಿಲ್ಲ ಎಂದರೆ ಹೇಗೆ?

ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಗ್ರಾಮಗಳಲ್ಲಿ ಬಸ್‌ನಿಲ್ದಾಣ ಪ್ರಾರಂಭ

838 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ತಾಲ್ಲೂಕಿನ ರಾಜನೂರು ಮಂಠಾಳ ಗ್ರಾಮಗಳ ಜನಸಂಖ್ಯೆ, 25 ಸಾವಿರ ಇದ್ದು ಸದರೀ ಗ್ರಾಮಗಳಲ್ಲಿ ಬಸ್ ನಿಲ್ದಾಣ ಇಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ ಬಸ್‌ನಿಲ್ದಾಣಗಳ ಸ್ಥಾಪನೆಗೆ ಸರ್ಕಾರವು ಕೈಗೊಂಡ ಕ್ರಮವೇನು ಹಾಗೂ ಕ್ರಮ ಕೈಗೊಳ್ಳದಿದ್ದರೆ ಕಾರಣವೇನು?

ಇ) ಸದರಿ ಗ್ರಾಮಗಳಲ್ಲಿ ಬಸ್ ನಿಲ್ದಾಣಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಸನ್ಮಾನ್ಯ ಅಧ್ಯಕ್ಷಣಿಯವರೇ ನಾನು ನನ್ನ ಮತಕ್ಷೇತ್ರದ ಹಳ್ಳಿಗಳಾದ ಮಂಠಾಳ್ ಮತ್ತು ರಾಜನೂರು, ಇವು ಬಸವಕಲ್ಯಾಣ ತಾಲ್ಲೂಕಿನ ಅತಿ ದೊಡ್ಡ ಗ್ರಾಮಗಳಾಗಿದ್ದು ವ್ಯಾಪಾರ ಕೇಂದ್ರಗಳು ಆಗಿವೆ. ಬಹಳ ಸಲ ಅಲ್ಲಿ ಬಸ್ ಸ್ಟ್ಯಾಂಡ್ ಆಗಬೇಕೆಂದು ಸಣ್ಣ ಪ್ರಮಾಣದಲ್ಲಿ ಆಗಬೇಕೆನ್ನುವ ಅಭಿಪ್ರಾಯದಿಂದ ಅಲ್ಲಿಯ ಜನರು ಬಹಳಷ್ಟು ಸಾರಿ ಪ್ರಯತ್ನ ಪಟ್ಟರು ಆಗಿಲ್ಲ. ಈ ಎಲ್.ಎ. ಕೊಶ್ಚನ್ ಮುಖಾಂತರವಾಗಿ ಕೇಳಿದರೆ ಸರ್ಕಾರದವರು ಏನಾದರೂ, ನಮ್ಮವರೆ ಮಿನಿಸ್ಟರ್ ಆಗಿದ್ದಾರೆ ನಮ್ಮ ಭಾಗದವರು ಇದ್ದಾರೆ ಇದರ ಬಗ್ಗೆ ಏನಾದರೂ ಪರಿಹಾರ ನೀಡಬಹುದು ಎಂದು ಕೇಳಿದ್ದೇನೆ. ಆದರೆ ಪ್ರಶ್ನೆ ಮುಖಾಂತರವಾಗಿ ನಿರ್ದಿಷ್ಟವಾಗಿ ಮಾಡುತ್ತೇವೆಂದು ಹೇಳಿಲ್ಲ. ಅವು ದೊಡ್ಡ ಗ್ರಾಮಗಳೇ ಆಗಿವೆ, ಮಳೆಗಾಲದಲ್ಲಿ ಮಳೆ ಬರುವಂತಹ ಸಂದರ್ಭದಲ್ಲಿ ನಿಂತು ಕೊಳ್ಳಲು ತೊಂದರೆಯಾಗುತ್ತಿದೆ. ಬೇಸಿಗೆಯಲ್ಲಿ ತೊಂದರೆ ಆಗುತ್ತಿದೆ. 20-25 ಸಾವಿರ ಜನಸಂಖ್ಯೆ ಹೊಂದಿರತಕ್ಕ ದೊಡ್ಡ ಪಟ್ಟಣ ಇದ್ದು ಸದರಿ

ಪಟ್ಟಣಗಳಿಗೆ ಬಸ್ ಸ್ಟಾಂಡ್‌ನ ಅವಶ್ಯಕತೆ ಇದೆ. ಅದರ ಸಲುವಾಗಿ ನಾನು ತಮಗೆ ಒತ್ತಾಯಪೂರ್ವಕವಾಗಿ ಕೇಳುವುದು ಏನೆಂದರೆ ಅತೀ ಶೀಘ್ರವಾಗಿ ಈ ಎರಡು ಗ್ರಾಮಗಳಿಗೆ ತಾವು ಬಸ್ ಸ್ಟೇಷನ್ ಮಾಡುತ್ತೀರೋ ಹೇಗೆ ಎನ್ನುವುದರ ಬಗ್ಗೆ ನಿರ್ದಿಷ್ಟವಾಗಿ ತಮ್ಮ ಅಭಿಪ್ರಾಯ ಹೇಳಬೇಕು.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ ಸದಸ್ಯರು ಕೇಳಿದ ರಾಜನೂರು ಮತ್ತು ಮಂಟಳ ಗ್ರಾಮಗಳಲ್ಲಿ ಜನಸಂಖ್ಯೆ 25 ಸಾವಿರ ಇಲ್ಲ. ಅದರೆ ಜನಸಂಖ್ಯೆ 10 ಸಾವಿರ, 7 ಸಾವಿರ ಸಣ್ಣದಾದಂತ ವಿಲೇಜ್ ಅದಕ್ಕೆ ಬಸ್ ಸ್ಟ್ಯಾಂಡ್ ಬೇಕೆಂದು ಕೇಳಿದಿರಿ ಬಸ್ ಸ್ಟ್ಯಾಂಡ್ ಅವಶ್ಯ ಇಲ್ಲ 2 ಶೆಲ್ಟರ್ ಕೊಟ್ಟಿದ್ದೇವೆ. ಜಿಲ್ಲಾ ಪರಿಷತ್ ಕಡೆಯಿಂದ ಕಟ್ಟಿಸಿದ್ದೇವೆ. ರಾಜನೂರು ಮಂಟಾಳ್‌ದಲ್ಲಿ ಇದು ನ್ಯಾಷನಲ್ ಹೈವೆ ಇದು ಕಾರಣ ಎಷ್ಟೋ ಬಸ್ಸು ಬರುತ್ತವೆ ಹೋಗುತ್ತದೆ. ಅವರಿಗೆ ನಿಲ್ಲಲು ಜಾಗ ಇದೆ. ತಮಗೂ ಗೊತ್ತು ಅದಕ್ಕೆ ಹಿಂದುಳಿದ ಎಷ್ಟೊ ವಿಲೇಜ್ ಬಸ್ ಸ್ಟ್ಯಾಂಡ್ ಇಲ್ಲ. ಮುಂದೆ ಮಾಡೋಣ ಈಗ ಅವಶ್ಯಕತೆ ಇಲ್ಲ.

ಹಿರೆಕೆರೂರು ರಸ್ತೆ ಸಾರಿಗೆ ಘಟಕದಲ್ಲಿರುವ ಬಸ್‌ಗಳ ಸಂಖ್ಯೆ.

354 - ಶ್ರೀ ಬಿ.ಎಚ್. ಬನ್ನಿಕೋಡ್ (ಹೀರೇಕೆರೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆ.ಎಸ್.ಆರ್.ಟಿ.ಸಿ. ಹೀರೇಕೆರೂರು ಘಟಕದಲ್ಲಿ ಇರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು? ಅವುಗಳಲ್ಲಿ (6) ಲಕ್ಷ ಕಿ.ಮೀ.ಗಿಂತ ಹೆಚ್ಚು ಓಡಿರುವ ಬಸ್ಸುಗಳ ಸಂಖ್ಯೆ ಎಷ್ಟು? ಎಷ್ಟು ಕಿ.ಮೀ. ಓಡಿದ ನಂತರ ಹಳೆ ಬಸ್ಸುಗಳನ್ನು ಬದಲಾಯಿಸಿ ಹೊಸ ಬಸ್ಸುಗಳನ್ನು ಬದಲಾಯಿಸಿ ಹೊಸ ಬಸ್ಸುಗಳನ್ನು ಆಳವಡಿಸುವ ನೀತಿ ಇದೆ?*

ಆ) *1992-93ನೇ ಸಾಲಿನಲ್ಲಿ ಹಿರೇಕೆರೂರು ಘಟಕಕ್ಕೆ ಎಷ್ಟು ಹೊಸ ಬಸ್ಸುಗಳನ್ನು ಒದಗಿಸಲಾಗಿದೆ?*

ಇ) *ಇನ್ನೂ ಎಷ್ಟು ಹಳೆ ಬಸ್ಸುಗಳನ್ನು ಬದಲಾಯಿಸಿ ಹೊಸ ಬಸ್ಸುಗಳನ್ನು ಪೂರೈಕೆ ಮಾಡುವ ಅವಶ್ಯಕತೆ ಇದೆ, ಈ ಬಗ್ಗೆ ತೆಗೆದುಕೊಂಡ ಹಾಗೂ ತೆಗೆದುಕೊಳ್ಳುವ ಕ್ರಮಗಳೇನು?*

ಈ) *ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಹಿರೇಕೆರೂರು ತಾಲ್ಲೂಕಿನಲ್ಲಿ ಸಮಯಕ್ಕೆ ಸರಿಯಾಗಿ ಸಂಚರಿಸದೆ ಇರುವುದರಿಂದ ಮತ್ತು ಅವಶ್ಯಕತೆಗೆ ಅನುಗುಣವಾಗಿ ಸಾಕಷ್ಟು ಬಸ್ಸುಗಳು ಸಂಚರಿಸದೆ ಇರುವುದರಿಂದ ಜನತೆ ಮೇಲಿಂದ ಮೇಲೆ ಬಸ್ಸುಗಳನ್ನು ತಡೆಯುವ ಸತ್ಯಾಗ್ರಹಗಳನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಈ ಬಗ್ಗೆ ಸುವ್ಯವಸ್ಥಿತ ಹಾಗೂ ಸಾಕಷ್ಟು ಬಸ್ಸುಗಳನ್ನು ಸಕಾಲದಲ್ಲಿ ಸಂಚರಿಸಲು ಕೈಗೊಂಡ ಹಾಗೂ ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 1) ಹೀರೇಕೆರೂರ್ ಡಿಪೋದಲ್ಲಿ 109 ವಾಹನಗಳಿರುತ್ತದೆ.

2) 43 ವಾಹನಗಳು 6 ಲಕ್ಷ ಕಿ.ಮೀ.ಗಿಂತ ಹೆಚ್ಚು ಕ್ರಮಿಸಿರುತ್ತದೆ.